# ಮನದ ಮಾತಿಗೆ ಮೌನ ಬೇಲಿ

ಪಮೇರಿಯನ್ ನಾಯಿಮರಿಯ ಮೈದಡವುತ್ತಾ ಅವರು ಕುಳಿತಿದ್ದು 'ನಿಮಗೆ ಎಲ್ಲಾ ಗೊತ್ತಲ್ಲ...', 'ಹೇಳೋಕೆ ಏನಿದೆ...', 'ದೇವರು ಏನು ಕೊಟ್ಟನೋ ಅದಷ್ಟೇ ಸಿಕ್ಕಿದ್ದು'— ಬರೀ ಇಂಥ ಮಾತು. ಅತ್ತ ಬಾಬ್‌ಕಟ್ ಅಲ್ಲದ, ಹುಲುಸಾಗಿಯೂ ಇಲ್ಲದ ಧವಳಕೇಶವನ್ನು ಆಕೆ ಹದವಾಗಿ ಬಾಚಿ, ಹಿಂದಕ್ಕೆ ಕಟ್ಟಿದರು. ಅಮ್ಮ ಎಲ್ಲಿ ಏನು ತಪ್ಪು ಮಾತಾಡಿಬಿಡುತ್ತಾರೋ ಎಂದು ಎಚ್ಚರಿಕೆ ವಹಿಸಲು ಅವರ ಮಗ, 'ಕನ್ನಡದ ಕಂದ' ಪಕ್ಕದಲ್ಲೇ ನಿಂತಿದ್ದರು. ನೀರವ ಮೌನದ ನಡುವೆ ಒಂದೋ ಎರಡೋ ಮಾತು. ನೆನಪುಗಳನ್ನು ಹಂಚಿಕೊಳ್ಳುವ ಮುಕ್ತತೆಯೂ ಇಲ್ಲದ ಮನಸ್ಥಿತಿ.

ಸಿನಿಮಾದ ಹಳೆಯ ಕತೆಗಳು, ವದಂತಿಗಳು ಎಲ್ಲವನ್ನೂ ಬದಿಗೊತ್ತಿ ಸೌಂದರ್ಯದ ಕುರಿತು ಹೇಳಿ ಎಂದಾಗ ಅವರು ಕೊಂಚ ನಿರಾಳವಾದರು.

'ನಾನು ಹೀರೋಯಿನ್ ಆದ ಕಾಲದಲ್ಲಿ ಇಷ್ಟೆಲ್ಲಾ ಕಾಸ್ಮೆಟಿಕ್ಸ್ ಇರಲಿಲ್ಲ. ಮೇಕಪ್ ಹಾಕಿಕೊಂಡು ಕೂತರೆ ಕೆಲವೇ ನಿಮಿಷಗಳಲ್ಲಿ ನನ್ನ ಮುಖ ಜಿಡ್ಡುಜಿಡ್ಡಾಗುತ್ತಿತ್ತು. ಅನೇಕರು ಆಗ ನನ್ನ ಜಿಡ್ಡುಮುಖವನ್ನು ಹಂಗಿಸಿದರು. ನಾನು ಅದನ್ನು ಹೋಗಿಸಿಕೊಳ್ಳಲು ಯಾರು ಏನು ಹೇಳಿದರೂ ಅದನ್ನೆಲ್ಲಾ ಮಾಡುತ್ತಿದ್ದೆ. ಒಮ್ಮೆ ಮುಖಕ್ಕೆ ಅತಿಯಾಗಿ ಹಬೆ ಕೊಟ್ಟು ಉರಿಯುತ್ತಿತ್ತು. ಅದರ ಮೇಲೆಯೇ ಮೇಕಪ್ ಹಚ್ಚಿಕೊಳ್ಳುವ ಅನಿವಾರ್ಯ. ಮೊದಮೊದಲು ಚೆನ್ನಾಗಿ ಕಂಡರಷ್ಟೇ ನಟಿಯಾಗಲು ಸಾಧ್ಯ ಎಂಬ ಭಾವನೆ ಇತ್ತು. ಆಮೇಲಾಮೇಲೆ ಅಭಿನಯದ ಮುಂದೆ ಬೇರಾವುದೂ ಲೆಕ್ಕವಿಲ್ಲ ಎಂದು ಅರಿವಾಯಿತು. ಒಂದಿಷ್ಟು ಕಾಲ ಸಂದ ಮೇಲೆ ಎರಡೂ ಮುಖ್ಯವೆನ್ನಿಸತೊಡಗಿತು. ಕನ್ನಡಿ ಮುಂದೆ ನಿಂತು ಅದೆಷ್ಟು ಸಲ ನನ್ನ ಸೌಂದರ್ಯವನ್ನು ನಾನೇ ವಿಮರ್ಶೆ ಮಾಡಿಕೊಂಡಿದ್ದೇನೋ? ವಯಸ್ಸಾಗುತ್ತಾ ಹೋದಂತೆ ಬದುಕಿನಲ್ಲಿ ಹಲವು ತಿರುವುಗಳು. ಅಂದುಕೊಂಡಂತೆಯೇ ಎಲ್ಲಾ ನಡೆದಿದ್ದರೆ ನಾನು ಇನ್ನೂ ಏನೋ ಆಗಿರುತ್ತಿದ್ದೆ. ಮಗನ ಹಡೆದೆ. ಬೆಳೆಸಿದೆ. ಪ್ರಶ್ನೆಗಳಿದ್ದವು. ಉತ್ತರಗಳು ಸಿಗಲಿಲ್ಲ. ಕೆಲವರನ್ನು ದೇವರೆಂದುಕೊಂಡೆ. ಅವರೂ ಶಾಶ್ವತವಾಗಿ ಉಳಿಯಲಿಲ್ಲ. ಗಿಡಗಳನ್ನು ಬೆಳೆಸಿದೆ. ಅವು ನಕ್ಕಾಗ ನಾನೂ ನಕ್ಕೆ. ಮಗನ ಸಿನಿಮಾ ಪ್ರೀತಿಗೂ ನೀರೆರೆದೆ....' (ನಿಟ್ಟುಸಿರು).

ಮಾತನಾಡಲು ಹಿಂದೂಮುಂದೂ ನೋಡುತ್ತಿದ್ದ ಅವರು ಪರೋಕ್ಷವಾಗಿ ಎಲ್ಲವನ್ನೂ ಹೇಳಿಬಿಡುವ ಉತ್ಸಾಹಕ್ಕೆ ಸಹಜವಾಗಿಯೇ ಬಿದ್ದರು. ಅಷ್ಟರಲ್ಲಿ ಮಗ 'ಅಮ್ಮಾ...' ಎಂದು ಎಚ್ಚರಿಸಿದ್ದೇ ತಡೆದರು. ಮತ್ತೆ ಮೌನ. ನಾಯಿ ಅವರ ಪಾದಗಳನ್ನು ನೆಕ್ಕುತ್ತಿತ್ತು.

● ಎನ್ವಿ

Printed and Published by S.V. Srinivasan on behalf of **The Printers (Mysore) Private Ltd.** Printed at M/s. Rajhans Enterprises, no. 134, 4th main road, Industrial Town, Rajajinagar, Bangalore - 560044. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: **K.N. SHANTH KUMAR.**

Editorial Office: 75, M.G Road, Bangalore-560 001 E-mail:editormy@mayura.co.in. Phone: 2588 0000, Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited.RNI No 17129/68